UASB LIBRARY
Jai Kisan
Agri Newspaper Clippings
Saturday 06-05-2023
Pg. 1

ಹಾಸನದ ಕಾರೆಕೆರೆ ಕೃಷಿ ಕಾಲೇಜಿನಲ್ಲಿ 17 ರಾಜ್ಯಗಳ 200 ವಿದ್ಯಾರ್ಥಿಗಳು

ಪ್ರತಿವರ್ಷ ಶೇ.50ರಷ್ಟು ಬೇಡಿಕೆ ಹೆಚ್ಚಳ ಉದ್ಯೋಗಾವಕಾಶವೂ ಹೇರಳ

ಕೃಷಿ ವ್ಯಾಸಂಗಕ್ಕೆ ಹೆಚ್ಚಿದ ಡಿಮ್ಯಾಂಡ್

■ ಪ್ರಕಾಶ್ ಜಿ.,ಹಾಸನ
Prakash.g@timesgroup.com

ಕೃಷಿ ಪ್ರಧಾನ ಜಿಲ್ಲೆಯ ಕಾರೆಕೆರೆ ಕೃಷಿ ಮಹಾ ವಿದ್ಯಾಲಯದಲ್ಲಿ 17 ರಾಜ್ಯಗಳ 200 ವಿದ್ಯಾರ್ಥಿಗಳು ಸೇರಿದಂತೆ 950 ವಿದ್ಯಾರ್ಥಿಗಳು ಕೃಷಿ ವ್ಯಾಸಂಗ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ಪ್ರತಿವರ್ಷ ಶೇ.50 ರಷ್ಟು ಕೃಷಿ ವ್ಯಾಸಂಗಕ್ಕೆ ಬೇಡಿಕೆ ಹೆಚ್ಚುತ್ತಿದೆ.

ಕೃಷಿ ಜಮೀನುಗಳು ಲೇಔಟ್‌ಗಳಾಗಿ ಪರಿವರ್ತನೆ ಆಗುತ್ತಿರುವ ಸಂದರ್ಭದಲ್ಲಿ ಕೃಷಿ ವ್ಯಾಸಂಗಕ್ಕೆ ರಾಜ್ಯದವರಷ್ಟೇ ಅಲ್ಲ ಹೊರ ರಾಜ್ಯದ ವಿದ್ಯಾರ್ಥಿಗಳು ನೀಟ್ ಪರೀಕ್ಷೆ ಬರೆದು ಸೀಟ್ ಗಿಟ್ಟಿಸಿಕೊಂಡು ವ್ಯಾಸಂಗ ಮಾಡುತ್ತಿರುವುದು ವಿಶೇಷ. ಮನುಕುಲದ ಉಳಿವಿಗೆ ಕೃಷಿ ಚಟುವಟಿಕೆ ಬೇಕೇ ಬೇಕು. ಹೀಗಾಗಿ ಕೃಷಿ ವ್ಯಾಸಂಗದತ್ತ ವಿದ್ಯಾರ್ಥಿಗಳ ಆಸಕ್ತಿ ಹೆಚ್ಚುತ್ತಿದೆ.

ರಾಜಸ್ಥಾನ, ಪಂಜಾಬ್, ಉತ್ತರ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ತೆಲಂಗಾಣ, ಮಣಿಪುರ, ಛತ್ತೀಸ್‌ಘಡ್, ಜಾರ್ಖಂಡ್, ಮಹಾರಾಷ್ಟ್ರ ಪಕ್ಕದ ಕೇರಳ, ಆಂಧ್ರ ಪ್ರದೇಶ ಸೇರಿದಂತೆ 17 ರಾಜ್ಯಗಳಿಂದ 200 ವಿದ್ಯಾರ್ಥಿಗಳು ಕಾರೆಕೆರೆಯ ಕೃಷಿ ಮಹಾವಿದ್ಯಾಲಯದಲ್ಲಿ ಈಗಾಗಲೇ ಪ್ರಥಮ ವರ್ಷದಿಂದ ನಾಲ್ಕನೇ ವರ್ಷದ ವಿದ್ಯಾರ್ಥಿಗಳಾಗಿ ಅಭ್ಯಾಸದಲ್ಲಿ ನಿರತವಾಗಿದ್ದಾರೆ.

''ಕಾಲೇಜಿನ ವಿದ್ಯಾರ್ಥಿಗಳಲ್ಲಿ 110 ವಿದ್ಯಾರ್ಥಿಗಳು ಕೃಷಿ, 75 ವಿದ್ಯಾರ್ಥಿಗಳು ಕೃಷಿ ಬಯೋಟೆಕ್, 75 ವಿದ್ಯಾರ್ಥಿಗಳು ಆಹಾರ ತಂತ್ರಜ್ಞಾನ ವ್ಯಾಸಂಗ ಮಾಡುತ್ತಿದ್ದಾರೆ,'' ಎಂದು ಕಾರೆಕೆರೆ (ಮಡೇನೂರು) ಕೃಷಿ ಕಾಲೇಜಿನ ಡೀನ್ ಡಾ.ಎಸ್.ಎನ್.ವಾಸುದೇವನ್ ಹರ್ಷ ವ್ಯಕ್ತಪಡಿಸಿದ್ದಾರೆ.



ಮನುಷ್ಯ ಬದುಕಿರುವರೆಗೂ ಕೃಷಿ ಚಟುವಟಿಕೆ ಇದ್ದೇ ಇರುತ್ತದೆ. ಹೀಗಾಗಿ ಕೃಷಿ ವ್ಯಾಸಂಗದತ್ತ ವಿದ್ಯಾರ್ಥಿಗಳು ಆಸಕ್ತರಾಗುತ್ತಿದ್ದಾರೆ ಹಾಗೂ ಉದ್ಯೋಗಾವಕಾಶವೂ ಹೆಚ್ಚಿದೆ.

- ಡಾ.ಎಸ್.ಎನ್.ವಾಸುದೇವನ್, ಕಾರೆಕೆರೆ ಕೃಷಿ ಕಾಲೇಜಿನ ಡೀನ್, ಹಾಸನ.

ರಾಜ್ಯದಲ್ಲಿ ಆರು ವಿವಿ: ರಾಜ್ಯದಲ್ಲಿ ಕೃಷಿ ವ್ಯಾಸಂಗಕ್ಕಾಗಿ ಬೆಂಗಳೂರು, ಹಾಸನ, ಧಾರವಾಡ, ರಾಯಚೂರು, ಶಿವಮೊಗ್ಗ, ಬೀದರ್ ಹಾಗೂ ಬಾಗಲಕೋಟೆಯಲ್ಲಿ ಕೃಷಿ ವಿವಿಗಳು ಇವೆ. ದ್ವಿತೀಯ ಪಿಯುಸಿಯಲ್ಲಿ ಪಡೆದ ಅಂಕದಲ್ಲಿ ಶೇ.50 ಹಾಗೂ ಸಿಇಟಿ ರ‍್ಯಾಂಕ್ ಆಧಾರದಲ್ಲಿ ಕೃಷಿ ವ್ಯಾಸಂಗಕ್ಕೆ ದಾಖಲು ಮಾಡಿಕೊಳ್ಳಲಾಗುತ್ತದೆ.

ಉದ್ಯೋಗಾವಕಾಶ

ಕೃಷಿ, ತೋಟಗಾರಿಕೆ ಇಲಾಖೆಯಲ್ಲಿ ಉದ್ಯೋಗಾವಕಾಶ, ಬೀಜೋತ್ಪಾದನೆ ಹಾಗೂ ಗೊಬ್ಬರ, ಕ್ರಿಮಿನಾಶಕ ಸಂಸ್ಥೆಗಳು, ಕೃಷಿ ಯಂತ್ರೋಪಕರಣ, ಕೈಗಾರಿಕೆ, ಕೃಷಿ ಕಾಲೇಜಿನಲ್ಲಿ ಉಪನ್ಯಾಸಕ ಮತ್ತಿತರ ಹುದ್ದೆ ಹೀಗೆ ಉದ್ಯೋಗಾವಕಾಶ, ವ್ಯಾಸಂಗ ಪೂರ್ಣಗೊಂಡ ಕೂಡಲೇ ಕ್ಯಾಂಪಸ್ ಸೆಲೆಕ್ಷನ್ ಇರುವುದು ಕೂಡ ಕೃಷಿ ವ್ಯಾಸಂಗದತ್ತ ಆಕರ್ಷಿತರಾಗಲು ಪ್ರಮುಖ ಕಾರಣ.

ಕೃಷಿ ಕುಟುಂಬದ ಹಿನ್ನೆಲೆಯ ವಿದ್ಯಾರ್ಥಿಗಳಾದಲ್ಲಿ ಪಹಣಿ ಒದಗಿಸಿದರೆ ಶೇ.50 ರಷ್ಟು ದಾಖಲಾತಿಗೆ ಅವಕಾಶವಿದೆ. ಉಳಿದ ಶೇ.50 ರಷ್ಟರಲ್ಲಿ ಸಿಇಟಿ ತೇರ್ಗಡೆಯಾದವರಿಗೆ, ಜಾತಿ ಮೀಸಲು ಅನ್ವಯ ದಾಖಲಾತಿಗೆ ಅವಕಾಶ ನೀಡಲಾಗುತ್ತದೆ.

ಆಸಕ್ತಿ ಏಕೆ?: ''ವೈದ್ಯಕೀಯ ಹಾಗೂ ಐಟಿ, ಬಿಟಿಗೆ ಮಾರುಹೋಗುತ್ತಿದ್ದ ವಿದ್ಯಾರ್ಥಿಗಳು ಹಾಗೂ ಪೋಷಕರು ಕೃಷಿ ವ್ಯಾಸಂಗದ ಅವಧಿ ನಾಲ್ಕು ವರ್ಷ ಜತೆಗೆ ಶುಲ್ಕ ದುಬಾರಿಯಲ್ಲ, ಉದ್ಯೋಗಾವಕಾಶಗಳು ಹೆಚ್ಚಿದೆ. ದೇಶ, ವಿದೇಶದಲ್ಲೂ ಕೃಷಿ ವ್ಯಾಸಂಗ ಮಾಡಿದವರಿಗೆ ಬೇಡಿಕೆ ಇದೆ ಎಂಬ ಸತ್ಯವನ್ನು ಅರಿತ ಕಾರಣದಿಂದ ವರ್ಷದಿಂದ ವರ್ಷಕ್ಕೆ ಕೃಷಿ ವ್ಯಾಸಂಗಕ್ಕೆ ದಾಖಲಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ,''ಎನ್ನುತ್ತಾರೆ ಕಾರೆಕೆರೆ (ಮಡೇನೂರು) ಕೃಷಿ ಕಾಲೇಜಿನ ಡೀನ್ ಡಾ. ವಾಸುದೇವನ್.

06-05-2023
V-karanataka Pg 01

ಕೇರಳ, ತಮಿಳುನಾಡಿನೊಂದಿಗೆ ಪೈಪೋಟಿ । ತೆಂಗು ಖರೀದಿ ಕೇಂದ್ರದ ಬೇಡಿಕೆ

ಕರುನಾಡ ಎಳನೀರಿಗೆ ಉತ್ತರದಲ್ಲಿ ಬೇಡಿಕೆ

■ ತಿ.ನಾ ಪದ್ಮನಾಭ ಮಾಗಡಿ ಗ್ರಾಮಾಂತರ
Paddu.thippasandara@gmail.com

ತೆಂಗು ಕೃಷಿಯಲ್ಲಿ ದೇಶದಲ್ಲಿ 2 ನೇ ಸ್ಥಾನದಲ್ಲಿರುವ ಕರ್ನಾಟಕವು ಈಗ ಉತ್ತರ ಭಾರದ ರಾಜ್ಯಗಳಿಗೆ ಎಳನೀರು ರಫ್ತು ಮಾಡಿ ಇತರ ರಾಜ್ಯಗಳಿಗೂ ನೆಡ್ಡು ಹೊಡೆಯುತ್ತಿದೆ.

ರಾಜ್ಯದ ಬಯಲು ಸೀಮೆ ಎಳನೀರಿಗೆ ಉತ್ತರ ಭಾರತ ರಾಜ್ಯಗಳು ಫಿದಾ ಆಗಿದ್ದು, ಹೆಚ್ಚು ಎಳನೀರಿಗೆ ರಾಜ್ಯಕ್ಕೆ ಬೇಡಿಕೆ ಇಟ್ಟಿವೆ. ಇದರಿಂದಾಗಿ ಎಳನೀರು ಉತ್ಪಾದಿಸಿ ಮಾರಾಟ ಮಾಡುತ್ತಿರುವ ಕೇರಳ, ತಮಿಳುನಾಡು ರಾಜ್ಯಗಳಿಗೆ ತೀವ್ರ ಪೈಪೋಟಿ ಎದುರಾಗಿದೆ. ರಾಜ್ಯದ ಅತಿದೊಡ್ಡ ಎಳನೀರು ಮಾರುಕಟ್ಟೆ ಮಂಡ್ಯ ಮದ್ದೂರಿನಿಂದಲೇ 80ಕ್ಕೂ ಹೆಚ್ಚು ಲಾರಿಗಳು ಉತ್ತರ ಪ್ರದೇಶ, ಮಹಾರಾಷ್ಟ್ರದ ಮುಂಬಯಿ, ಜಲಗಾಂವ್ ಪ್ರಾಂತ್ಯಗಳಿಗೆ ಎಳನೀರು ತುಂಬಿಕೊಂಡು ತೆರಳುತ್ತಿವೆ.

ಅನ್ನದಾತನ ಲೆಕ್ಕಾಚಾರ

ತೆಂಗಿನಕಾಯಿ ಕೆ.ಜಿಗೆ 23ರಿಂದ 27ರೂ.ಗೆ ಮಂಡಿಯಲ್ಲಿ ರೈತರಿಂದ ಹಾಕಿಸಿಕೊಳ್ಳುತ್ತಾರೆ. ಇನ್ನು 1000 ಕಾಯಿ ಒಣಗಿಸಿದರೆ ಗರಿಷ್ಠ 1.3 ಕ್ವಿಂಟಾಲ್ ಕೊಬ್ಬರಿ ಸಿಗುತ್ತದೆ. ಇಂದಿನ ದರದಂತೆ ರೈತರಿಗೆ 13,000 ರೂ. ಬರುತ್ತದೆ. ಆದರೆ, ಒಂದು ಎಳನೀರಿಗೆ ಕನಿಷ್ಠ 17 ರಿಂದ 20 ರೂ. ದರವಿದ್ದು, ಅದೇ ಸಾವಿರ ಕಾಯಿಗೆ ರೈತರು 4,000 ರೂ. ಹೆಚ್ಚು ಆದಾಯ ಗಳಿಸುತ್ತಿದ್ದಾರೆ. ವ್ಯಾಪಾರಿಗಳೇ ತೋಟಕ್ಕೆ ಬಂದು ಕಾಯಿ ಕೊಯ್ಯುವುದರಿಂದ ಕಾಯಿ ಕೀಳಿಸಲು, ಸಾಗಿಸುವ ವೆಚ್ಚವೂ ಉಳಿಯುತ್ತದೆಂಬ ಲೆಕ್ಕ ಅನ್ನದಾತನದು.

ರೈತರ ಚಿತ್ತ ಎಳನೀರಿನತ್ತ

ಮಾರುಕಟ್ಟೆಯಲ್ಲಿ ಒಣ ಕೊಬ್ಬರಿ ಬೆಲೆ 6 ತಿಂಗಳಿಂದ ಕುಸಿದಿರುವ ಕಾರಣ ರೈತರ ಮನಸ್ಸು ಈಗ ಎಳನೀರಿನತ್ತ ನಾಟಿದೆ. ಹೀಗಾಗಿ ಮದ್ದೂರು, ಮಂಡ್ಯದ ಎಳನೀರು ವ್ಯಾಪಾರಿಗಳಿಗೆ ಎಳನೀರು ಬೆಳೆವ ಇತರ ಜಿಲ್ಲೆಗಳ ರೈತರಿಂದಲೂ ಎಳನೀರು ಖರೀದಿಗೆ ಆಹ್ವಾನ ಬರುತ್ತಿವೆ.

ಎಳನೀರು ಕೃಷಿ

5ಲಕ್ಷ ಹೆಕ್ಟೇರ್
ರಾಜ್ಯದಲ್ಲಿರುವ ತೆಂಗಿನ ಪ್ರದೇಶ

20ಲಕ್ಷ
ಉತ್ತರ ರಾಜ್ಯಗಳಿಗೆ ನಿತ್ಯ ರವಾನಿಸುವ ಎಳನೀರು

ಬೆಳೆ ಬಳಕೆ

ಶೇ.**15**- ಎಳನೀರಿಗೆ
ಶೇ. **50**-ತೆಂಗಿನಕಾಯಿ
ಶೇ.**05**-ಕೈಗಾರಿಕಾ ಉತ್ಪನ್ನಗಳಿಗೆ
ಶೇ.**30**-ಎಣ್ಣೆ ಮತ್ತಿತರ ಉಪಯೋಗಕ್ಕೆ

ಯಾವ ಭಾಗದಿಂದ ರವಾನೆ

ಮದ್ದೂರು, ಮಂಡ್ಯ, ರಾಮನಗರ, ತುಮಕೂರು, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ, ಮಂಗಳೂರು.

ಎಷ್ಟು ರಾಜ್ಯಕ್ಕೆ ರಫ್ತು?

ಪುಣೆ, ಗೋವಾ, ಮಹಾರಾಷ್ಟ್ರ ಮಧ್ಯಪ್ರದೇಶ, ರಾಜಾಸ್ಥಾನ, ದಿಲ್ಲಿ ಉತ್ತರ ಪ್ರದೇಶ, ಜಾರ್ಖಂಡ್, ಪಂಜಾಬ್.

ರೈತರಿಗೆ ಕನಿಷ್ಠ ಲಾಭ

ಎಳನೀರು ದಳ್ಳಾಳಿಗಳು ರೈತರಿಂದ ನೇರವಾಗಿ ಒಂದು ಎಳನೀರನ್ನು 17 ರಿಂದ 20 ರೂಪಾಯಿಗಳಿಗೆ ಖರೀದಿ ಮಾಡಿ ಮಾರುಕಟ್ಟೆಗೆ 30 ರಿಂದ 35 ರೂಪಾಯಿಗಳಿಗೆ ನೀಡುತ್ತಿದ್ದಾರೆ. ಮಾರುಕಟ್ಟೆಯಿಂದ ಬೇರೆಡೆಗೆ ರಫ್ತಾಗುವಾಗ 45 ರಿಂದ 60 ರೂ. ಬೆಲೆಗೆ ಗ್ರಾಹಕರಿಗೆ ಮಾರಾಟವಾಗುತ್ತದೆ. ಹೊರ ರಾಜ್ಯಗಳಲ್ಲಿ 70ರಿಂದ 80ರೂ. ಗೆ ಮಾರಾಟವಾಗುತ್ತಿದೆ. ಇಲ್ಲೂ ದಳ್ಳಾಳಿಗಳ ಕೈ ಮೇಲಾಗಿದ್ದು, ರೈತನಿಗೆ ಮಾತ್ರ ದಕ್ಕುತ್ತಿರುವುದು ಅಲ್ಪಮಾತ್ರ.



ಸರಕಾರ ಒಂದು ಜಿಲ್ಲೆಒಂದು ಉತ್ಪನ್ನ ಯೋಜನೆಯಲ್ಲಿ ತೆಂಗು ಖರೀದಿ ಕೇಂದ್ರವನ್ನು ಆರಂಭಿಸಿ ಬೆಂಬಲ ಬೆಲೆ ಕೊಟ್ಟರೆ ರೈತರು ಎಳನೀರು ಮಾರಾಟವನ್ನು ನಿಲ್ಲಿಸುತ್ತಾರೆ.

- ಶಶಿಕುಮಾರ್ ಆಕ್ಟಿಶಾಸ್ತ್ರಿ ಪಾಳ್ಯ.

ಬೆಳಗಾವಿ, ಧಾರವಾಡ ಸೇರಿದಂತೆ ಇತರ ರಾಜ್ಯಗಳಿಗೂ ಮದ್ದೂರು ದೊಡ್ಡ ಎಳನೀರು ಮಾರುಕಟ್ಟೆಯಿಂದ ನಿತ್ಯ 8 ಲಕ್ಷ ಎಳನೀರು ಸ್ಥಳೀಯ ಜಿಲ್ಲಾ ಕೇಂದ್ರಗಳಿಗೆ ಮಾರಾಟಕ್ಕೆ ಹೋಗುತ್ತಿದೆ.

- ಸ್ವಾಮಿ ಮದ್ದೂರು, ಎಳನೀರು ವ್ಯಾಪಾರಿ

06-05-2023
V-karanataka Pg 09

For more information visit
University Library Website
Web - uasbagrilibindia.org
E-mail- librarian@uasbangalore.edu.in

ದೇಶದಲ್ಲಿ ಹಸುವಿಗೆ ಪವಿತ್ರ ಸ್ಥಾನವನ್ನು ನೀಡಿ ಪೂಜಿಸುತ್ತಾರೆ. ಅದೇ ರೀತಿ ಭಾರತದ ಗೋ ಪರಂಪರೆಯಲ್ಲಿ ಹೈನುಗಾರಿಕೆ ತಳಿಗಳಲ್ಲಿ ಗಿರ್‌ಗೆ ವಿಶಿಷ್ಟ ಸ್ಥಾನವಿದೆ. ಗುಜರಾತಿನ ಸೌರಾಷ್ಟ್ರ ಸಮೀಪದ ಗಿರ್ ಅರಣ್ಯ ಪ್ರದೇಶ ಇವುಗಳ ಮೂಲಸ್ಥಾನವಾಗಿದೆ. ಗಿರ್ ಭಾರತದ ಅತ್ಯಂತ ಪ್ರಾಚೀನ ತಳಿಯಾಗಿದ್ದು, ಇದು ಅತೀ ಹೆಚ್ಚು ಹಾಲು ಕೊಡುವ ತಳಿಯಾಗಿದೆ. ದೇಶೀಯ ಗೋ ತಳಿಯ ತದ್ರೂಪಿಯನ್ನು ಸೃಷ್ಟಿಸುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿರುವ ಎನ್‌ಡಿಆರ್‌ಐ ಇದೀಗ ದೇಶದ ಮೊದಲ ದೇಶೀಯ ಹಸುವಿನ ತಳಿಯಾದ ಗಿರ್ ತದ್ರೂಪಿ ಸಂತಾನವನ್ನು ಯಶಸ್ವಿಯಾಗಿ ಸೃಷ್ಟಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಇನ್‌ಸ್ಟಿಟ್ಯೂಟ್‌ಗೆ ಭೇಟಿ ನೀಡಿ ಭಾರತದ ಮೊದಲ ಕ್ಲೋನ್(ತದ್ರೂಪಿ) ಸಂತಾನೋತ್ಪತ್ತಿಯ ಗಿರ್ ಹಸುಗಂಗಾವನ್ನು ಭೇಟಿಯಾಗಿದ್ದಾರೆ. ಈ ತದ್ರೂಪಿ ಗಿರ್ ಹಸುವಿನ ಕುರಿತ ಮಾಹಿತಿ ಇಲ್ಲಿದೆ...

ಏನಿದು ತದ್ರೂಪಿ ಸಂತಾನೋತ್ಪತ್ತಿ

ರಾಷ್ಟ್ರೀಯ ಡೇರಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಜನ್ಮ

ಭಾರತದ ಮೊದಲ ತದ್ರೂಪಿ ಗಿರ್ ಹಸು ಹರ್ಯಾಣದ ಕರ್ನಾಲ್‌ನಲ್ಲಿರುವ ರಾಷ್ಟ್ರೀಯ ಡೇರಿ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಜನ್ಮತಾಳಿದೆ. ಕ್ಲೋನ್ ಸಂತಾನೋತ್ಪತ್ತಿಯ ಮೂಲಕ ಕರು ಮಾರ್ಚ್ 16 ರಂದು ಜನಿಸಿತು. ಸೊಮ್ಯಾಟಿಕ್ ಸೆಲ್ ನ್ಯೂಕ್ಲಿಯರ್ ಟ್ರಾನ್ಸ್‌ಫರ್ (ಎಸ್‌ಸಿಎನ್‌ಟಿ) ಎಂದು ಕರೆಯಲ್ಪಡುವ ಪ್ರಕ್ರಿಯೆಯಿಂದ ಕ್ಲೋನ್‌ಸಂತಾನೋತ್ಪತ್ತಿ ಪ್ರಕ್ರಿಯೆಯನ್ನು ನಡೆಸಲಾಗಿದೆ.



ದಿನಕ್ಕೆ 15-20 ಲೀಟರ್ ಹಾಲು ನೀಡುತ್ತದೆ

ಹಾಲಿನ ಉತ್ಪಾದನೆಯನ್ನು ಹೆಚ್ಚಿಸಲು ಕೇಂದ್ರದ ಆಶಯದಂತೆ ಕ್ಲೋನ್ ಮಾಡಿದ ಹಸು ದಿನಕ್ಕೆ 15-20 ಲೀಟರ್ ಹಾಲು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ಉತ್ತಮ ಪೋಷಕ ಮತ್ತು ಉತ್ತಮ ನಿರ್ವಹಣೆಯೊಂದಿಗೆ ಹಾಲು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಬಹುದು.

ಹೆಣ್ಣು ಕರುವಿಗೆ ಗಂಗಾ ಎಂದು ನಾಮಕರಣ

ಕ್ಲೋನ್ ಮಾಡಿದ ಗಿರ್ ಹೆಣ್ಣು ಕರುವಿಗೆ ಗಂಗಾ ಎಂದು ಹೆಸರಿಡಲಾಗಿದೆ. ಹುಟ್ಟಿದ ತಕ್ಷಣ ಗಿರ್ ಗಂಗಾ 32 ಕೆಜಿ ತೂಕವನ್ನು ಹೊಂದಿದ್ದಳು. ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವ ಸರ್ಕಾರದ ಪ್ರಯತ್ನದ ಭಾಗವಾಗಿ ಈ ಬೆಳವಣಿಗೆಯಾಗಿದೆ. ದೇಶದ ಪ್ರಧಾನ ಡೇರಿ ಸಂಶೋಧನಾ ಸಂಸ್ಥೆಯಾದ ಎನ್‌ಡಿಆರ್‌ಐ 2021 ರಿಂದ ಗಿರ್ ಮತ್ತು ಸಾಹಿವಾಲ್‌ನಂತಹ ಸ್ಥಳೀಯ ಹೆಚ್ಚು ಹಾಲು ನೀಡುವ ಹಸುವಿನ ತಳಿಗಳನ್ನು ಕ್ಲೋನ್ ಮಾಡುವ ಯೋಜನೆಯ ಆನ್ವಯ ಕೆಲಸ ಮಾಡುತ್ತಿದೆ.

ಕ್ಲೋನಿಂಗ್ ಸಂತಾನೋತ್ಪತ್ತಿಯ ಮತ್ತು ಸಾಮಾನ್ಯ ಜಾನುವಾರುಗಳು ಒಂದೇ ಹಾಲು ಉತ್ಪಾದನಾ ಸಾಮರ್ಥ್ಯವನ್ನು ಹೊಂದಿವೆ. ಈ ಮೂಲಕ ಹೆಚ್ಚು ಗುಣಮಟ್ಟದ ಜಾನುವಾರುಗಳೊಂದಿಗೆ, ಭಾರತವು ತನ್ನ ಹಾಲು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವುದರ ಹೊರತಾಗಿ, ವಿಜ್ಞಾನಿಗಳು ಸಂಶೋಧನೆಯು ಆಳವಿನ ಅಂಚಿನಲ್ಲಿರುವ ಹಸುಗಳ ಸ್ಥಳೀಯ ತಳಿಗಳ ಸಂರಕ್ಷಣೆಯಲ್ಲಿ ಪ್ರಮುಖ ಮೈಲಿಗಲ್ಲು ಎಂದು ಸಾಬೀತುಪಡಿಸಿದೆ. ಮುಖ್ಯವಾಗಿ ಗುಜರಾತಿನ ಸ್ಥಳೀಯ ತಳಿಯಾದ ಗಿರ್ ಹಸುಗಳು ವಿನಯಶೀಲ ಸ್ವಭಾವ, ಉತ್ತಮ ಹಾಲು, ಒತ್ತಡದ ಸಹಿಷ್ಣುತೆ ಮತ್ತು ಹಲವಾರು ಉಷ್ಣವಲಯದ ರೋಗಗಳಿಗೆ ನಿರೋಧಕತೆಯಿಂದಾಗಿ ಜನಪ್ರಿಯವಾಗಿವೆ.

ಇದು ಇತರ ಹಸುಗಳಂತೆಯೇ ಇರುತ್ತವೆ



ವಿದೇಶಗಳಿಗೆ ಗಿರ್ ತಳಿ ರಫ್ತು

ಗಿರ್ ಜಾನುವಾರುಗಳನ್ನು ಬ್ರೆಜಿಲ್, ಅಮೆರಿಕ ಮೆಕ್ಸಿಕೋ ಮತ್ತು ವೆನೆಜುವೆಲಾಕ್ಕೂ ರಫ್ತು ಮಾಡಲಾಗಿದೆ. ಅಭಿವೃದ್ಧಿಪಡಿಸಿದ ಸ್ಥಳೀಯ ತಂತ್ರವು ಭಾರತೀಯ ಡೇರಿ ಕ್ಷೇತ್ರದಲ್ಲಿ ಹೊಸ ಬೆಳವಣಿಗೆಗಳಿಗೆ ಸಾಕ್ಷಿಯಾಗಿದೆ.



ಹರ್ಯಾಣದ ಕರ್ನಾಲ್‌ನಲ್ಲಿರುವ ರಾಷ್ಟ್ರೀಯ ಡೇರಿ ರಿಸರ್ಚ್‌ನಲ್ಲಿ ದೇಶದ ಮೊದಲ ತದ್ರೂಪಿ ಗಿರ್ ಜನನ

ಪ್ರಕ್ರಿಯೆ ಹೇಗೆ ನಡೆಯಿತು?

ದೇಶದಲ್ಲಿ ಸ್ಥಳೀಯ ತಳಿಗಳ ಸಂಖ್ಯೆಯನ್ನು ಹೆಚ್ಚಿಸುವುದು ಇದರ ಗುರಿಯಾಗಿದೆ. ಹಾಲಿನ ಇಳುವರಿಯನ್ನು ಹೆಚ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರ ನಿರ್ದೇಶನದಂತೆ, ಕ್ಲೋನಿಂಗ್ ತಂತ್ರವನ್ನು ಬಳಸಿಕೊಂಡು ಹೆಚ್ಚು ಇಳುವರಿ ನೀಡುವ ಹಸುಗಳನ್ನು ಕ್ಲೋನಿಂಗ್ ಮಾಡಲು ನಿರ್ಧರಿಸಲಾಗಿತ್ತು. ಈ ಕ್ಲೋನಿಂಗ್ ಪ್ರಕ್ರಿಯೆಯನ್ನು ಕೈಗೊಳ್ಳಲು ವಿಜ್ಞಾನಿಗಳು ಆರಂಭದಲ್ಲಿ ಜೀವಂತ ಹಸುಗಳ ಅಂಡಾಣುಗಳನ್ನು ಸಂಗ್ರಹಿಸಿದ್ದಾರೆ. ಬಳಿಕ ಅಲ್ಟಾಸೌಂಡ್ ಗೈಡೆಡ್ ಸೂಜಿಗಳನ್ನು ಬಳಸಿ ಹಸುವಿನ ಅಂಡಾಶಯದಿಂದ ಮೊಟ್ಟೆಗಳನ್ನು ಹೊರತೆಗೆದಿದ್ದಾರೆ. ಈ ಮೊಟ್ಟೆಗಳನ್ನು 24 ಗಂಟೆಗಳ ಕಾಲ ಪ್ರಯೋಗಾಲಯದಲ್ಲಿ ಇರಿಸಲಾಗಿದ್ದು, ಉತ್ತಮ ಹಸುಗಳಿಂದ ದೈಹಿಕ ಕೋಶಗಳನ್ನು ವಿಜ್ಞಾನಿಗಳು ಸಂಗ್ರಹಿಸಿದ್ದಾರೆ. ಈ ಕೋಶಗಳು ಕ್ಲೋನ್ ಸಂತಾನೋತ್ಪತ್ತಿಗೆ ಅನುವಂಶಿಕ ಅಂಶಗಳನ್ನು ಒದಗಿಸಿವೆ. ವಿಜ್ಞಾನಿಗಳು ದೈಹಿಕ ಕೋಶದ ನ್ಯೂಕ್ಲಿಯಸ್ ಅನ್ನು ನ್ಯೂಕ್ಲಿಯೇಟೆಡ್ ಮೊಟ್ಟೆಯ ಕೋಶಕ್ಕೆ ಸ್ಥಳಾಂತರಿಸಿದರು. ಬಳಿಕ ಅದರ ಅನುವಂಶಿಕ ವಸ್ತುವನ್ನು ತೆಗೆದುಹಾಕಲಾಯಿತು.

ಗಿರ್ ತಳಿಯನ್ನೇ ಏಕೆ ಆಯ್ಕೆ ಮಾಡಲಾಯಿತು?

ದೇಶದ ಹಾಲು ಉತ್ಪಾದನೆ ಮತ್ತು ಡೇರಿ ಉದ್ಯಮದ ಬೆಳವಣಿಗೆಯನ್ನು ಹೆಚ್ಚಿಸಲು ಸ್ಥಳೀಯ ಜಾನುವಾರುಗಳಾದ ಥಾರ್ಪಾರ್ಕರ್, ಗಿರ್, ಸಾಹಿವಾಲ್ ಮತ್ತು ರೆಡ್ ಸಿಂಧಿ ಪ್ರಮುಖವಾಗಿವೆ. ಗಿರ್ ಜಾನುವಾರುಗಳು ಒತ್ತಡದ ಪರಿಸ್ಥಿತಿಗಳಿಗೆ ಸಹಿಷ್ಣುತೆ ಮತ್ತು ವಿವಿಧ ಉಷ್ಣವಲಯದ ರೋಗಗಳಿಗೆ ಪ್ರತಿರೋಧ ಶಕ್ತಿಯನ್ನು ಹೆಚ್ಚಿನ ಮಟ್ಟದಲ್ಲಿ ಹೊಂದಿವೆ. ವಿದೇಶದಲ್ಲೂ ಗಿರ್ ಜಾನುವಾರುಗಳು ಸಾಕಷ್ಟು ಜನಪ್ರಿಯವಾಗಿವೆ.



06-05-2023
Hosadiganta Pg 19